**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No. 3221/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಜ್ಞಾನೇಶ್ವರ ಸಿ ಎಸ್ | ***P.W-8*** |
| ತಂದೆಯ ಹೆಸರು | : ಚಂದ್ರಶೇಖರ ಎಂ ಎಸ್ | ***C.W- 8*** |
| ವಯಸ್ಸು | : 51 ವರ್ಷ | |
| ಉದ್ಯೋಗ | : ಹಿರಿಯ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ರಾಣೇಬೆನ್ನೂರು | |
| ವಾಸ | : ರಾಣೇಬೆನ್ನೂರು | |

**ದಿನಾಂಕಃ 12-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ನಾನು 2019 ರಿಂದ ಇಲ್ಲಿಯವರಿಗೂ ಸಾರ್ವಜನಿಕ ಆಸ್ಪತ್ರೆ ರಾಣೇಬೆನ್ನೂರು ನಲ್ಲಿ ಹಿರಿಯ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 09-01-2023 ರಂದು ರಾತ್ರಿ 8.30 ಗಂಟೆಗೆ ಪಾರ್ವತಿ ಕಲ್ಲಪ್ಪ ಚಿಣಗಿ ಎನ್ನುವವರು ಹಲ್ಲೆಗೆ ಒಳಗಾಗಿ ಗಾಯದ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆ ಗೆ ಬಂದಿದ್ದರು, ಸದರಿಯವರನ್ನು ಪರೀಕ್ಷಿಸಿದಾಗ ತಲೆಯ ಮಧ್ಯಭಾಗದಲ್ಲಿ ಹಾಗೂ ಮೈ ಕೈ ನಲ್ಲಿ ನೋವು ಇದೆ ಎಂದು ಹೇಳಿರುತ್ತಾರೆ. ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದು, ಸದರಿ ಗಾಯದ ಪ್ರಮಾಣ ಪತ್ರ ವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಚಾಸಾ-1 ರವರ ಮೈ ಕೈ ನೋವಿಗೆ ಚಿಕಿತ್ಸೆ ನೀಡಿ ಕಳುಹಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಎಂ ಎಸ್ ಹೆಚ್ ವಕೀಲರಿಂದಃ**

1. ನಿಪಿ-6 ರಲ್ಲಿ ಹೇಳಿರುವ ಗಾಯಗಳು ಒಬ್ಬ ವ್ಯಕ್ತಿ ತಾವಾಗಿಯೇ ಬಿದ್ದಾಗಲೂ ಈ ರೀತಿಯ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ-1 ರವರಿಗೆ ಆದ ಗಾಯಗಳು ತಾವಾಗಿಯೇ ಬಿದ್ದು ಉಂಟುಮಾಡಿಕೊಂಡಿದ್ದರೂ ಸಹ ಚಾಸಾ-1 ರವರಿಗೆ ಸಹಾಯವಾಗಲಿ

ಎಂದು ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಹಲ್ಲೆಯಿಂದಾದ ಗಾಯದ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆ ಗೆ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಆ ರೀತಿಯ ಯಾವುದೇ ಗಾಯವಾಗಿರದಿದ್ದರೂ ಸಹ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ನಾನು ಯಾವುದೇ ಚಿಕಿತ್ಸೆ ನೀಡಿಲ್ಲ ಮತ್ತು ಅವರು ಯಾವುದೇ ಹಲ್ಲೆಗೆ ಒಳಪಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.